ವಿ. ಹೇಮಂತಕುಮಾರ್, ಬೆಂಗಳೂರು

ಹೆಂಡತಿಯ ಜೊತೆ ಸೆಲ್ಫಿ ತೆಗೆಸಿಕೊಳ್ಳುವ ಗಂಡನ ಬಗ್ಗೆ ನಿಮ್ಮ ಅಭಿಪ್ರಾಯವೇನು?



ಸ್ವಂತ ಹೆಂಡತಿಯ ಜೊತೆಯೆ? ದ ಫೆಲೋ ಹ್ಯಾಸ್ ವೆರಿ ಪೂರ್ ಟೇಸ್ಟ್.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಪಾಪ ಮಾಡಿದವರು 'ಯಮಲೋಕ'ಕ್ಕೇ ಏಕೆ ಹೋಗಬೇಕು?

ಇವರ ಜೀವನವೃತ್ತಿ ವೇದನೆ ನಿರ್ಧಾರವಾಗುವುದು ಅಲ್ಲೇ.

ರಾಜೇಶ್ವರಿ, ಪುತ್ತೂರು

ಜಾತಿಯನ್ನು ಮೀರಿದಂತಹ ಮಹಾತ್ಮನನ್ನು ಎಳೆತಂದು 'ಇವರು ನಮ್ಮ ಜಾತಿ' ಎಂದು ಕಚ್ಚಾಡುವರಲ್ಲಾ, ಸರಿಯೆ?

ಇನಿತೂ ಸರಿಯಲ್ಲ. ಇಂತಹವರ ಜಾತಿಯಲ್ಲಿ ಹುಟ್ಟಿದ್ದೇ ಆ ಮಹಾತ್ಮನ ಅಕ್ಷಮ್ಯ ಅಪರಾಧ.

ವಿಜಯಕುಮಾರ್ ಎಚ್.ಕೆ. ರಾಯಚೂರು

ಹುಡುಗಿಯರು ನಗುವಾಗ ತಮ್ಮ ಹಸ್ತದಿಂದ ಬಾಯನ್ನು ಮರೆಮಾಚುವುದು ಏಕೆ ಸರ್?



'ನಕ್ಕರೆ ಮುತ್ತು ಉದುರುತ್ತದೆ' ಎಂಬ ಹೇಳಿಕೆಯನ್ನು ನಿಜವೆಂದು ನಂಬಿದ್ದಾರಂತೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಇತ್ತೀಚೆಗೆ ಯುವಕರೇ ಹೆಚ್ಚಾಗಿ ಗಡ್ಡ ಬಿಡುತ್ತಾರಲ್ಲ?

ಸದ್ಯ! ಇದರಲ್ಲೂ ಸಮಾನತೆ ಬೇಕೆನ್ನುತ್ತಾ ಯುವತಿಯರು ಬಿಟ್ಟಿಲ್ಲವಲ್ಲ!

ಅನಂತಪದ್ಮನಾಭ, ಮೈಸೂರು

ವಿಧಾನಸೌಧದ ಪಕ್ಕದಲ್ಲೇ ಲೋಕಾಯುಕ್ತ ಕಚೇರಿ, ಸರಿಯೇ?

ಬೇಟೆ ಇರುವಲ್ಲೇ ಹೊಂಚು ಹಾಕುವುದು ವನನಿಯಮ.

ಮಲ್ಲಿಕಾರ್ಜುನ, ಸುರಧೇನುಪುರ

ಕಾಯಕವೇ ಕೈಲಾಸ. ಕಾಯವೇ...?

ಕೈಲಾಸಕ್ಕೆ ತಲುಪಿಸುವ ವಾಹನ.

ಸುರೇಶ್ ಬಿ.ವಿ. ಬೆಂಗಳೂರು

ನಗುಮುಖದ ದೇವರ ವಿಗ್ರಹದ ಪ್ರಭಾವಳಿಯ ಮಧ್ಯೆ ಹುಲಿ, ಸಿಂಹದ ಮುಖಗಳನ್ನೇಕೆ ಇಡುತ್ತಾರೆ?

ಹುಲಿಯ ಸಾಮರ್ಥ್ಯ, ಸಿಂಹದ ಘನತೆ ಇರುವವರು ಮಾತ್ರ ನಗುನಗುತ್ತಿರಲು ಸಾಧ್ಯವೆನ್ನಲು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ನಾನು ನಿವೃತ್ತ ನೌಕರ. ನನಗೆ ಎಲ್ಲಾ ವಾರಗಳು ಭಾನುವಾರವಾಗಿ ಕಾಣುತ್ತವೆ. ಏಕೆ?

ಛೆ! ನಿಮ್ಮ ಮನೆಯವರು ವೀಕೆಂಡಿನಲ್ಲಿ ಮಾತ್ರ ಮಾಡಿಸುವ ಕೆಲಸವನ್ನು ನಿತ್ಯವೂ ಮಾಡಿಸುತ್ತಿದ್ದಾರೆಂದಾಯಿತು!

ಬಿ. ಚಂದ್ರೇಗೌಡ, ಬೆಂಗಳೂರು

ನಶೆ ಏರಿಸಿಕೊಳ್ಳಲು ನಿಶೆಯನ್ನೇ ಏಕೆ ಆಯ್ಕೆ ಮಾಡಿಕೊಳ್ಳುತ್ತಾರೆ?

ದಿಶೆ ತಪ್ಪಿಸಲು ಉಷೆಗಿಂತ ನಿಶೆಯೇ ಉತ್ತಮವೆಂದು.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಬಿರುಗಾಳಿ ಬೀಸಿದರೂ ಬೆಟ್ಟಗುಡ್ಡಗಳೇಕೆ ಅಲುಗಾಡುವುದಿಲ್ಲ?

ಕಲ್ಲಿನ ಸ್ವೆಟರ್ ತೊಟ್ಟಿರುವುದರಿಂದ ನಡುಕ ಉಂಟಾಗುವುದಿಲ್ಲವಂತೆ.

ಕೆ.ವಿ. ಗೋವಿಂದಾಚಾರಿ, ಮೈಸೂರು

ಭಾರಿ ಶ್ರೀಮಂತರು ಹೆಚ್ಚಾಗಿ ಹಣವನ್ನು ದೇವರಹುಂಡಿಗೆ ಹಾಕುವುದೇಕೆ?

'ನನ್ನ ಸಂಪಾದನೆಯ ಮಾರ್ಗ ಬಹಿರಂಗಗೊಳಿಸಬೇಡಪ್ಪ' ಎಂದು ಗುಟ್ಟಾಗಿ ನೀಡುವ ಕಾಣಿಕೆಯದು.

ಕೆ.ಹೆಚ್.ಆರ್.ಕೆ. ರೆಡ್ಡಿ, ಬೆಂಗಳೂರು

ದೊಡ್ಡ ಆಲದಮರದ ಭಾರವನ್ನು ಭೂಮಿ ಹೇಗೆ ತಡೆಯುತ್ತದೆ?

ಕನಿಷ್ಠ, ಅನಿಷ್ಟ, ಪಾಪಿಷ್ಟರನ್ನೇ ತಡೆಯುವ ಅದಕ್ಕೆ ಇದು ಹಗುರಾತಿಹಗುರ.

## ವಾರದ ಪ್ರಶ್ನೆ

ಪಿ. ಜಯವಂತ ಪೈ, ಕುಂದಾಪುರ

ಪ್ರಾಣಿಗಳಲ್ಲಿ ಆತ್ಮಹತ್ಯೆ ಏಕಿಲ್ಲ?

ಆತ್ಮ, ಆತ್ಮಗೌರವ ಮುಂತಾದ ಚಿಲ್ಲರೆ ವಿಷಯಗಳ ಬಗ್ಗೆ ಯೋಚಿಸುವುದಿಲ್ಲವಂತೆ.

ರತ್ನಜ, ಮೈಸೂರು

ಮನುಷ್ಯ ಕೆಟ್ಟದ್ದನ್ನು ಕಲಿಯುವಷ್ಟು ಸುಲಭವಾಗಿ ಒಳ್ಳೆಯದನ್ನು ಕಲಿಯುವುದಿಲ್ಲ. ಏಕೆ?

ಒಳ್ಳೆಯದಕ್ಕೆ ಎಕ್ಸಾಂಪಲ್ ಸಿಗುವುದು ಕಷ್ಟ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಚಿನ್ನ ದುಬಾರಿಯಾಗಿದೆ. ಬಡವರು ತಾಳಿಗೆ ಏನು ಮಾಡಬೇಕು?

ತಾಳಿ, ಕೊಳ್ಳಬೇಕು.

ಎನ್.ಕೆ. ಹೆಬ್ಬಾರ್, ಕೋಣಿ

ಬೇರೆಯವರ ರೋಗಗಳನ್ನು ಗುಣಪಡಿಸುವ ವೈದ್ಯರೂ ನಿಧನರಾಗುತ್ತಾರೆ. ತಮ್ಮ ಪ್ರತಿಕ್ರಿಯೆ?

ಸಾವಿರಾರು ಕಿಲೋಮೀಟರ್ ಪ್ರಯಾಣಿಕರನ್ನು ಹೊತ್ತೊಯ್ದ ವಾಹನ ಕಡೆಗೆ ಸ್ಕ್ರ್ಯಾಪ್ ಯಾರ್ಡ್‌ಗೇ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಬೆಳಗಾಗುವುದಕ್ಕೂ, ಕೋಳಿ ಕೂಗುವುದಕ್ಕೂ ಏನು ಸಂಬಂಧ?



ರಾತ್ರಿಯೆಲ್ಲ ಬೆವರಿಗೆ ಒದ್ದೆಯಾಗಿರುವ ಪುಕ್ಕವನ್ನು ಬಿಸಿಲಿಗೆ ಹಾಕಿರೆಂದು ಹುಂಜ ಕೂಗುವುದಂತೆ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ನದಿಗಳ ನೀರು ಸಿಹಿ. ಆದರೆ ಅವು ಸೇರುವ ಸಮುದ್ರದ ನೀರು ಉಪ್ಪು. ಏಕೆ?

ನದಿಗಳು ಓಡಿ ಓಡಿ, ಜಲಚರಗಳು ಈಜಿ ಈಜಿ ಬೆವೆತಿರುತ್ತವೆ.

ದೇವೇಂದ್ರ, ಕಡೂರು

ಹಣವಿದ್ದಾಕ್ಷಣ ನೆಮ್ಮದಿ ಇರಲು ಸಾಧ್ಯವೆ?

ಹಣ ನೆಮ್ಮದಿಯ ವಿರುದ್ಧ ಪದ; ಇಲ್ಲವಾದಾಗ ಹಂಬಲ, ಇದ್ದಾಗ ಭಯ.

■ ರಾಮ್